**ಮೆಂಟಲ್ ಡಿಸೆಬಿಲಿಟೀಸ್ ಕಾಯ್ದೆ 1999ರ ಅಡಿಯಲ್ಲಿ ಔಟಿಸಂ, ಸೆರೆಬ್ರಲ್ ಪಾಲ್ಸಿ ಇರುವ, ಮಾನಸಿಕ ಬೆಳವಣಿಗೆ ಕುಂಠಿತವಾಗಿರುವ ಮತ್ತು ಅನೇಕ ಅಶಕ್ತತೆಗಳಿರುವ ವ್ಯಕ್ತಿಗಳಿಗಾಗಿ ಖಾತೆಗಳನ್ನು ತೆರೆಯುವುದು.**

ಕೊಟಕ್ ಮಹೀಂದ್ರಾ ಬ್ಯಾಂಕ್ ಲಿ., ನಲ್ಲಿ ನಾವು ಔಟಿಸಂ, ಸೆರೆಬ್ರಲ್ ಪಾಲ್ಸಿ ಇರುವ, ಮಾನಸಿಕ ಬೆಳವಣಿಗೆ ಕುಂಠಿತವಾಗಿರುವ ಮತ್ತು ಅನೇಕ ಅಶಕ್ತತೆಗಳಿರುವ ವ್ಯಕ್ತಿಗಳಿಗಾಗಿ ಖಾತೆಗಳನ್ನು ತೆರೆಯುತ್ತೇವೆ.

ಈ ಖಾತೆಯನ್ನು ಲೀಗಲ್ ಗಾರ್ಡಿಯನ್‌ಶಿಪ್ ಸರ್ಟಿಫಿಕೇಟ್‌ನ ಆಧಾರದಲ್ಲಿ ಕಾನೂನು ಸಮ್ಮತ ಪಾಲಕರು ತೆರೆಯಬಹುದು. ಸರ್ಟಿಫಿಕೇಟು ಮೆಂಟಲ್ ಹೆಲ್ತ್ ಕಾಯ್ದೆ 1987ರ ಅಡಿಯಲ್ಲಿ ಒಂದೊ ಜಿಲ್ಲಾ ಕೋರ್ಟ್ ನಿಂದ ಅಥವಾ ನ್ಯಾಶನಲ್ ಟ್ರಸ್ಟ್‌ಫಾರ್ ಪರ್ಸನ್ಸ್‌ವಿದ್ ಔಟಿಸಂ, ಸೆರೆಬ್ರಲ್ ಪಾಲ್ಸಿ, ಮೆಂಟಲ್ ರಿಟಾರ್ಡೇಶನ್ ಮತ್ತು ಮಲ್ಟಿಪಲ್ ಡಿಸೆಬಿಲಿಟೀಸ್ ಕಾಯ್ದೆ 1999ರ ಅಡಿಯಲ್ಲಿ ರಚಿಸಲಾದದ ಸ್ಥಳೀಯ ಮಟ್ಟದ ಸಮಿತಿಯಿಂದ ನೀಡಲ್ಪಟ್ಟಿರಬೇಕು.

ಇಂತಹ ಖಾತೆಗಳನ್ನು ತೆರೆಯಲು ಅವಶ್ಯಕವಾದ ಸರ್ಟಿಫಿಕೇಟ್‌ಗಾಗಿ ಕಾನೂನು ಸಮ್ಮತ ಪಾಲಕರು ಸ್ಥಳೀಯ ಮಟ್ಟದ ಸಮಿತಿಗಳನ್ನು ಸಂಪರ್ಕಿಸಬಹುದು. ಸ್ಥಳೀಯ ಮಟ್ಟದ ಸಮಿತಿಯ ವಿಳಾಸವನ್ನು ಶಾಖಾ ಕಚೇರಿಯಲ್ಲಿ ಪಡೆದುಕೊಳ್ಳಬಹುದು ಅಥವಾ ನ್ಯಾಶನಲ್ ಟ್ರಸ್ಟ್‌ನ www.thenationaltrust.in ಈ ವೆಬ್ ಸೈಟ್‌ನಿಂದ ಪಡೆದುಕೊಳ್ಳಬಹುದು.

ಖಾತೆದಾರ ಆತ/ಆಕೆ ತನ್ನದೇ ಹಣಕಾಸನ್ನು ನಿರ್ವಹಿಸಲು ಸಮರ್ಥನೆಂದು ಖಚಿತಪಡಿಸಿದಲ್ಲಿ, ಇಂತಹ ವ್ಯಕ್ತಿಗಳಿಗೆ ಖಾತೆ ತೆರೆಯಲು/ಕಾರ್ಯನಿರ್ವಹಿಸಲು ಕಾನೂನಾತ್ಮಕ ಪಾಲಕ ಪ್ರಮಾಣಪತ್ರ ಕಡ್ಡಾಯವಲ್ಲ.

ಇಂತಹ ಖಾತೆಗಳನ್ನು ತೆರೆಯುವ ಆಪರೇಟ್ ಮಾಡುವ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ದಯವಿಟ್ಟು ಶಾಖಾ ಅಧಿಕಾರಿಗಳನ್ನು ಸಂಪರ್ಕಿಸಿರಿ.